ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಸಚಿವರು).—

ಅ) ಜಿಲ್ಲಾಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಕಿರು ನೀರು ಸರಬರಾಜು ಯೋಜನೆ ಮತ್ತು ಕೊಳವೆ ಬಾವಿಗಳ ದುರಸ್ತಿಗಾಗಿ ಯಾವುದೇ ಕ್ರಮಗಳು ಇರುವುದಿಲ್ಲ. ಆದರೆ ತಾಲ್ಲೂಕು ಮಟ್ಟದಲ್ಲಿ ಒಬ್ಬ ಜಾಲಕ, ಒಬ್ಬ ಮೆಕಾನಿಕ್, ಒಬ್ಬ ಗಾರೆ ಕೆಲಸಗಾರ ಮತ್ತು ಇಬ್ಬರು ಸಹಾಯಗಾರರನ್ನೊಳಗೊಂಡ ಸಂಚಾರಿ ದುರಸ್ತಿ ವಾಹನವೊಂದನ್ನು ನಲ್ಲಿ ನೀರಿನ ಯೋಜನೆ ಮತ್ತು ಕೈಪಂಪುಗಳ ದುರಸ್ತಿಗಾಗಿ ವ್ಯವಸ್ಥೆ ಮಾಡಲಾಗಿದೆ. ಇದುವರೆಗೆ ಗ್ರಾಮಪಂಚಾಯ್ತಿಗಳು ನಿರ್ವಹಿಸುತ್ತಿದ್ದು ಈಗ ನಿರ್ವಹಣೆಯನ್ನು ಮಂಡಲ ಪಂಚಾಯಿತಿಗಳು ನೋಡಿಕೊಳ್ಳುತ್ತವೆ.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಕಾರ್ಯ ನಿರ್ವಹಿಸಲು ತೊಡಗಿದ ನಂತರ ಪ್ರತಿಯೊಂದು ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆ ಮತ್ತು ದುರಸ್ತಿ ವ್ಯವಸ್ಥೆಯನ್ನು ಅವರಿಗೆ ಸಂಪೂರ್ಣವಾಗಿ ವಹಿಸಿ ಕೊಡಲಾಗುವುದು.

ಆ) ಜಿಲ್ಲಾ ಮಟ್ಟದ ಮತ್ತು ಕೆಳಗಿನ ಎಲ್ಲಾ ಸಿಬ್ಬಂದಿಗಳನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳಿಗೆ ವಹಿಸಿಕೊಡುವುದರಿಂದ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಕಿರು ನೀರು ಸರಬರಾಜು ಯೋಜನೆಗಳ ಮತ್ತು ಕೈ ಪಂಪುಗಳ ದುರಸ್ತಿ ಮತ್ತು ನಿರ್ವಹಣೆ ಕೆಲಸವನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳು ನಿರ್ವಹಿಸುತ್ತವೆ.

ಮ್ಯಾಕಲಮರ್ಡಿ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ

೩೪೧. ಶ್ರೀ ಶಿವಾನಂದ ಹೆಚ್. ಕಾಜಲಗಿ (ಬೈಲ ಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾಂ ಜಿಲ್ಲೆಯ ಬೈಲ ಹೊಂಗಲ ತಾಲ್ಲೂಕಿನ ಮ್ಯಾಕಲಮರ್ಡಿ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ನೀರಿನ ಅಭಾವ ಪರಿಹರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಇ) ಆ ಊರಿಗೆ ವಾಹನಗಳಿಂದ ನೀರು ಕೊಡಲು ಯಾವಾಗ ಪ್ರಾರಂಭಿಸಲಾಗಿದೆ. ಮತ್ತು ಅದಕ್ಕೆ ಇದುವರೆಗೆ ತಗುಲಿದ ವೆಚ್ಚ ಎಷ್ಟು?

ಈ) ಬೈಲ ಹೊಂಗಲ ತಾಲ್ಲೂಕು ಬರಗಾಲ ಪರಿಹಾರ ಸಮಿತಿಯಲ್ಲಿ ಮೇಲ್ಕಂಡ ಗ್ರಾಮದಲ್ಲಿ ಎರಡು ತೆರೆದ ಬಾವಿಗಳನ್ನು ತೋಡಲು ಯಾವಾಗ ನಿರ್ಣಯಿಸಲಾಯಿತು?

ಉ) ಭೂ ಸೇನಾ ನಿಗಮದವರಿಗೆ ತೆರೆದ ಬಾವಿಗಳನ್ನು ತೆಗೆಯಲು ಆದೇಶ ನೀಡಿದರೂ ಕೂಡ ಇದುವರೆಗೆ ಏಕೆ ತೆಗೆಯಲಿಲ್ಲ.

ಊ) ಬಾವಿಗಳನ್ನು ತೆಗೆಯದೆ ಇದ್ದ ಕಾರಣ ಅವರ ಮೇಲೆ (ಭೂಸೇನಾ ನಿಗಮದವರ) ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೫ರ ಆಗಸ್ಟ್ ತಿಂಗಳಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಒದಗಿಸಲಾಗಿದ್ದ ವರ್ಷದ ಅಭಾವ ಕಾರಣದಿಂದಾಗಿ ಕೊಳವೆ ಬಾವಿಯಲ್ಲಿ ನೀರು ಕಡಿಮೆಯಾದ ಕಾರಣ ನೀರಿನ ಅಭಾವವುಂಟಾಯಿತು. ಆದರೆ ವಿವಿಧ ಕಾರ್ಯಕ್ರಮಗಳಲ್ಲಿ ಯಶಸ್ವಿಯಾದ ಮತ್ತು ಕೈಪಂಪು ಅಳವಡಿಸಲಾದ ೪ ಕೊಳವೆ ಬಾವಿಗಳನ್ನು ಹಾಕಲಾಗಿರುತ್ತದೆ,

ಇ) ೧೭-೫-೮೬ ರಿಂದ ೧೬-೬-೮೬ರವರೆಗೆ ವಾಹನಗಳ ಮೂಲಕ ನೀರು ಸರಬರಾಜು ಆಗುತ್ತಿತ್ತು. ಆ ಮೇಲೆ ಮಳೆಯಾದ್ದರಿಂದ ವಾಹನ ಮೂಲಕ ನೀರು ಸರಬರಾಜು

ಸಲ್ಲಿಸಲಾಗಿದ್ದು ಮತ್ತೆ ೨೩-೧೦-೮೬ ರಿಂದ ಪ್ರಾರಂಭಿಸಲಾಗಿದೆ. ಇದಕ್ಕಾಗಿ ತಗುಲಿದ ವೆಚ್ಚ ರೂ. ೩೬,೬೬೩-೫೫ ಮಾತ್ರ.

ಈ) ೨-೧೨-೮೯ರಂದು.

ಉ) ಬರ ಪರಿಹಾರ ಕಾಮಗಾರಿ ೧೯೮೫-೮೬ರಲ್ಲಿ ಒಂದು ತೆರೆದ ಬಾವಿಯನ್ನು ತೆಗೆದು ಕೊಳ್ಳಲು ಭೂ ಸೇನಾ ನಿಗಮ ಬೈಲಹೊಂಗಲಕ್ಕೆ ತಿಳಿಸಲಾಗಿತ್ತು. ೧೯೮೬-೮೭ನೇ ಸಾಲಿನಲ್ಲಿ ರೂ. ೧೮ ೮೦೦-೦೦ಗಳನ್ನು ಮೊದಲನೇ ಕಂತಾಗಿ ಕೊಡಲಾಯಿತು. ೩-೨ ೮೭ರಲ್ಲಿ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಮತ್ತು ಭೂ ಶಾಸ್ತ್ರಜ್ಞರು ಎರಡು ಸ್ಥಳಗಳನ್ನು ಗುರುತು ಮಾಡಿದರು. ೨೪-೧೨-೮೭ರಲ್ಲಿ ಡಿ.ಡಿ.ಸಿ. ಸಭೆಯಲ್ಲಿ ಕೆಲಸವನ್ನು ಶೀಘ್ರವಾಗಿ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. ಭೂ-ಸೇನಾ ನಿಗಮದವರಿಂದ ಯೋಜನೆ ಮತ್ತು ನಕ್ಷೆಗಳು ತಯಾರಾಗುತ್ತಿವೆ.

ಊ) ಈ ಕಾಮಗಾರಿಯನ್ನು ತೆಗೆದುಕೊಳ್ಳುವ ಕಾರ್ಯಕ್ರಮ ಪ್ರಾರಂಭ ಮಾಡಿದ್ದಾರೆ.

ಯುದ್ಧದಲ್ಲಿ ಮರಣ ಹೊಂದಿದ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳ ಬಗ್ಗೆ

೬೩೮. ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಮಹಾನಗರ ಹದ್ದಿನಲ್ಲಿ ಕಿತ್ತೂರು ಚೆನ್ನಮ್ಮ ರಾಣಿಯೊಂದಿಗೆ ಯುದ್ಧದಲ್ಲಿ ಮರಣ ಹೊಂದಿದ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳು (ಸಿಮೆಟ್ರಿ) ಇರುವುದರ ಬಗ್ಗೆ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ ಐತಿಹಾಸಿಕ ಮಹತ್ವದ ಈ ಅವಶೇಷಗಳ ರಕ್ಷಣೆಯ ವಿಚಾರವಾಗಿ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಬಂದಿದೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಮಾಲ್ಕಿ ವಟನ್ ಮಾರ್ಕೆಟ್ ಪೂರ್ವ ಭಾಗಕ್ಕೆ ಹೊಂದಿಕೊಂಡಿರುವ ಕ್ರಿಶ್ಚಿಯನ್ ಬರಿಯಲ್ ಗ್ರೌಂಡ್ (ಸ್ಮಶಾನ)ದಲ್ಲಿ ಹಿಂದಿನ ಬ್ರಿಟಿಷ್ ಅಧಿಕಾರಿಗಳ ಸಮಾಧಿಗಳು ಇದ್ದು ಅದರಲ್ಲಿ ಫ್ಯಾಕರೆ ಅಧಿಕಾರಿಯ ಸಮಾಧಿಯೂ ಇರುತ್ತದೆ.

ಆ) ಮಹಾನಗರ ಸಭೆಯಿಂದ ಈ ಸಮಾಧಿಗಳ ಸಂರಕ್ಷಣೆಗಾಗಿ ಅದರ ಸುತ್ತಲೂ ಆವರಣ ಗೋಡೆಯನ್ನು ಸನ್ ೧೯೮೭-೮೮ರಲ್ಲಿ ರೂ. ೫೧೦೩-೦೦ ಖರ್ಚು ಮಾಡಿ ದುರಸ್ತಿ ಮಾಡ ಲಾಗಿದೆ. ಸದರಿ ಜಾಗದ ಸ್ವಚ್ಛತೆಯನ್ನು ಸಹ ಕಾಯ್ದುಕೊಂಡು ಹೋಗಲಾಗುತ್ತಿದೆ.

ಸುಬ್ರಮಣ್ಯ ನಗರದ ಕೆರೆ ಅಂಗಳದ ಬಗ್ಗೆ

೬೩೯. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ ಕ್ಷೇತ್ರದಲ್ಲಿರುವ ಸುಬ್ರಮಣ್ಯ ನಗರ (ಮಿಲ್ಕ್ ಕಾಲೋನಿ) ಕೆರೆ ಅಂಗಳದ ಪ್ರದೇಶವನ್ನು ಖಾಸಗಿಯವರು ತಮ್ಮದೇ ಎಂದು ಹೇಳಿ ನ್ಯಾಯಾಲಯದಿಂದ ತಡೆ ಆಜ್ಞೆ ತಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?